ಕರ್ನಾಟಕ ವಿಧಾನ ಸಭೆ

ಮಂಗಳವಾರ 2ನೇಮಾರ್ಚ್ 1993

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕೊಟ್ಟೂರಿನಲ್ಲಿ ನಡೆದ ಗೋಲಿಬಾರಿನ ಬಗ್ಗೆ ವಿಚಾರಣೆ.

181 (121): ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ಕೊಟ್ಟೂರಿನಲ್ಲಿ ನಡೆದ ಪೋಲೀಸ್ ಗೋಲೀಬಾರಿನ ಬಗ್ಗೆ ವಿಚಾರಣೆಯು ಮುಗಿಸಿದೆಯೇ ?

2) ಇಲ್ಲದಿದ್ದಲ್ಲಿ, ಕೊಟ್ಟೂರು ಪೋಲೀಸ್ ಗೋಲೀಬಾರಿನ ಪ್ರಕರಣವನ್ನು ಸಿ.ಒ.ಡಿ.ಗೆ ದಾಖಲು ಮಾಡಲಾಗಿದೆಯೆ ? ಅಥವಾ ಮ್ಯಾಜಿಸ್ಟೇರಿಯಲ್ ವಿಚಾರಣೆಯಾಗಿದೆಯೇ ?

3) ಹಾಗಿದ್ದಲ್ಲಿ, ಸೊಂದೆವರಿಗೆ ನೀಡಲಾದ ಪರಿಹಾರದ ಬಗ್ಗೆ ಪೂರ್ಣ ವಿವರಗಳನ್ನು ವ್ಯಕ್ತಿಗತ ಮಾಹಿತಿಯೊಂದಿಗೆ ಒದಗಿಸುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

1. ಹೌದು, ಮುಗಿದಿದೆ.

2. ಮ್ಯಾಜಿಸ್ಟೇರಿಯಲ್ ವಿಚಾರಣೆಯಾಗಿರುತ್ತದೆ.

3. ಮೃತಪಟ್ಟ ಶ್ರೀ ಶಿವನಂಜಪ್ಪ ತಂದೆ ನಾಗಲಿಂಗಪ್ಪ ಮತ್ತು ಶ್ರೀ ದುರುಗಪ್ಪ ತಂದೆ ಈರಪ್ಪ ಇವರ ಎರಡು ಕುಟುಂಬಕ್ಕೂ ತಲಾ 20,000-00 ರೂಪಾಯಿಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಲಾಗಿದೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು:- ಮಾನ್ಯ ಅಧ್ಯಕ್ಷರೇ, ಕೊಟ್ಟೂರು ಫೈರಿಂಗ್ ಕೇಸ್ ಬಗ್ಗೆ ಎನ್‌ಕ್ವಯರಿ ಎಲ್ಲಾ ಕಂಪ್ಲೀಟ್ ಆಗಿದೆ ಹಾಗೂ ಸತ್ತ ಇಬ್ಬರು ಕುಟುಂಬದವರಿಗೆ ತಲಾ 20-20 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಈ 20 ಸಾವಿರ ಈಗಿನ ಕಾಲಕ್ಕೆ ಏನೂ ಆಗುವುದಿಲ್ಲ. ಎನ್‌ಕ್ವಯರಿ ಆಗಿ ಈಗಾಗಲೇ ಮೂರು ತಿಂಗಳು ಆಯಿತು. ಮೊದಲು ನಾನು ಈ ಕೇಸನ್ನು ಸಿಒಡಿಗೆ ಹಾಕಿ ಎಂದು ಕೇಳಿದ್ದೆ. ಸಿಒಡಿ ತನಿಖೆಯಾಗಿ ರಿಪೋರ್ಟ್ಸ್ ಬಂದರೆ ಅದು ಕರೆಕ್ಟಾಗಿ ಆಗುತ್ತದೆ ಎನ್ನುವ ಒಂದು ಉದ್ದೇಶ ನನಗೆ ಇತ್ತು. ಏಕೆಂದರೆ ಆ ಕ್ಷೇತ್ರದ ಬಗ್ಗೆ ನನಗೆ ಚೆನ್ನಾಗಿ ಗೊತ್ತಿರುವುದರಿಂದ ನಾನು ಕೇಳಿದ್ದೆ, ಅದಕ್ಕೆ ಮ್ಯಾಜಿಸ್ಟೇರಿಯಲ್ ಎನ್‌ಕ್ವಯರಿ ಮಾಡಿದರು. ಎನ್‌ಕ್ವಯರಿ ಮಾಡಿ ಪೂರ್ತಿ ಮಾಹಿತಿ ಕೊಡಿ ಎಂದು ಹೇಳಿದರೆ ಅವರಿಗೆ 20-20 ಸಾವಿರ ಕೊಟ್ಟಿರುವುದು ಮಾತ್ರ ಹೇಳುತ್ತಾರೆ. ಅಲ್ಲಿ ಯಾರು ಕಳ್ಳರು, ಯಾರು ಇದನ್ನು ಕ್ರಿಯೇಟ್ ಮಾಡಿದ್ದು ಏನೂ ಇಲ್ಲ. ಅಂತಹವರಿಗೆ ಪನಿಷ್‌ಮೆಂಟ್ ಏನು ? ಸಿಕ್ಕಿರುವವರು ಯಾರು ? ಅವರ ಹೆಸರೇನು ಎಂತಹ ಮಾಹಿತಿಯೂ ಇಲ್ಲ. 20 ಸಾವಿರದ ಪರಿಹಾರ ಈಗಿನ ಕಾಲಕ್ಕೆ ಕೊಟ್ಟರೆ ಅದು

ಎಲ್ಲಿ ಆಗುತ್ತದೆ. ಕನಿಷ್ಟ ಒಂದು ಲಕ್ಷ ರೂಪಾಯಿಯಾದರೂ ಕೊಡಬೇಕು. ದುಡಿಯುವಂತಹ ಇಬ್ಬರೂ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ನೀವು ಅವರಿಗೆ ಒಂದೊಂದು ಲಕ್ಷ ಕೊಡದೇ ಬರೀ 20–20 ಸಾವಿರ ಕೊಟ್ಟರೆ ಅದು ಭಿಕ್ಷೆ ಬೇಡಿದ ಹಾಗೆ ಆಯಿತು. ದಯಮಾಡಿ ಇದನ್ನು ಒಂದು ಲಕ್ಷ ರೂಪಾಯಿ ಮಾಡಬೇಕು ಎಂದು ಹೇಳುತ್ತೇನೆ. ಈ ಎನ್‌ಕ್ವಯರಿ ಮಾಡಿರುವುದು ಸರಿ ಇಲ್ಲ ಎಂದು ನನಗೆ ಕಾಣುತ್ತದೆ. ಅದರಲ್ಲೂ ಕೊಟ್ಟೂರು ಆಗಾಗ್ಗೆ ಫೇಸ್ ಮಾಡುತ್ತಾ ಇರತಕ್ಕಂತಹ ಪ್ರಾಬ್ಲಮ್ ಇದು. ಅದನ್ನು ಕ್ಲೋಸ್ ಮಾಡಬೇಕಾದರೆ ಸರಿಯಾದ ತನಿಖೆಯಾಗಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ ಇದು ಮ್ಯಾಜಿಸ್ಟೀರಿಯಲ್ ಎನ್‌ಕ್ವಾಯರಿ ಆಗಿದೆ, ಅದು ಸರಿಯಾದ ರೀತಿಯಲ್ಲಿ, ಆಗಿದೆಯೆಂದು ಸರ್ಕಾರದ ಅಭಿಪ್ರಾಯ. ಎರಡನೆಯದು ಮಾನ್ಯ ಸದಸ್ಯರು 20 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ ಅದು ಸಾಲದೆಂದು ಹೇಳಿದ್ದಾರೆ. ಅವರ ಅನಿಸಿಕೆ ನಿಜವಿರಬಹದು. ಆದರೆ ಈಗಿನ ನಿಯಮಗಳ ಪ್ರಕಾರ ಈ ತರಹ ಆಘಾತಗಳಿಗೆ ಯಾವ ಪರಿಹಾರ ಕೊಡುವ ನಿಯಮಗಳು ಇಲ್ಲ. ಆದರೆ ವಿಶೇಷವಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತೆಗೆದು ಅನುಕಂಪದ ಆಧಾರದ ಮೇಲೆ 20–20 ಸಾವಿರ ಕೊಡಲಾಗಿದೆ. ಅದನ್ನು ಪೆಚ್ಚಿಸತಕ್ಕ ಅಭಿಪ್ರಾಯ ಸಧ್ಯಕ್ಕೆ ಸರ್ಕಾರದಲ್ಲಿ ಇಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೆ, ಅನುಕಂಪದಿಂದ ಕೊಡುವ ಹಣವನ್ನು 20 ಸಾವಿರಕ್ಕೆ ನಿಲ್ಲಿಸಬೇಡಿ. ಅನುಕಂಪದ ಆಧಾರದ ಮೇಲೆ ಕೊಡುವುದನ್ನು 1 ಲಕ್ಷ ಮಾಡಿ. 20 ಸಾವಿರ ಕೊಟ್ಟರೆ ಏನೂ ಆಗುವುದಿಲ್ಲ. ದುಡಿಯುವ ಮಕ್ಕಳನ್ನು ಕಳೆದುಕೊಂಡಿದ್ದಾರೆ. ಆ ಸಂಸಾರದಲ್ಲಿ ದುಡಿಯುವ ಮಕ್ಕಳು ಯಾರೂ ಇಲ್ಲ. 1 ಲಕ್ಷವಾದರೂ ಮಾಡಿ. ಅದಕ್ಕೆ ಬೇರೆ ಫಂಡ್ ಇಲ್ಲದಿದ್ದರೆ ಮುಖ್ಯಮಂತ್ರಿಗಳ ಫಂಡ್‌ನಿಂದ ಕೊಡಿಸಿ ಪರವಾಗಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸಧ್ಯದ ನಿಮಯಗಳಲ್ಲಿ ಅವಕಾಶವಿಲ್ಲ. ನಿಯಮಗಳು ಬದಲಾವಣೆಯಾದರೆ ಪರಿಶೀಲಿಸಬಹುದು.

ಬೆಳಗಾವಿ ತಾಲ್ಲೂಕಿನ ಕೆದನೂರು ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತನೆ.

184 (1217): ಶ್ರೀ ಕೆ.ಸಿ. ಮಾಡಗೇಕರ್ ದೇಸಾಯಿ (ಹೀರೇಬಾಗೇವಾಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ತಾಲ್ಲೂಕಿನ ಕೆದನೂರು ಗ್ರಾಮದ ಪ್ರಾಕೃತಿಕ ಸೌಂದರ್ಯವನ್ನು ಸರ್ಕಾರ ಗಮನಿಸಿದೆಯೇ ?

ಆ. ಹಾಗಿದ್ದಲ್ಲಿ, ಆ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಸೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.